# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ರತ್ನಮ್ಮ ಅಧ್ಯಕ್ಷರು, ದೇವಪುರ ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ರಡಿ ಕ್ರಮ ಜರುಗಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 2018 ದಿನಾಂಕ:02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ಚಿತ್ರದುರ್ಗ ಜಿಲ್ಲೆ ಇವರ ಪತ್ರ ಸಂಖ್ಯೆ:ಜಿಪಂ:ಆ(9):ಮುಗಾರಾಗ್ರಾಉಖಾಯೋ/ಸಿಆರ್-30/2019-20, ದಿನಾಂಕ: 27.05.2019.
3. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಬೆಂಗಳೂರು, ಇವರ ಪತ್ರ ಹಾಗೂ ವಿಚಾರಣಾ ವರದಿ ಸಂಖ್ಯೆ:ಪ್ರಾಆಕ/ಅಭಿವೃದ್ಧಿ/ಸಿಆರ್/36/2019-20, ದಿನಾಂಕ:13.11.2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು, ಪ್ರಕರಣ 48(4) ಮತ್ತು 48(5) ರಡಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ಮೇಲೆ ದುರ್ವರ್ತನೆ, ಅಧಿಕಾರ ಮತ್ತು ಹಣ ದುರುಪಯೋಗಕ್ಕಾಗಿ ಕ್ರಮಕೈಗೊಳ್ಳುವ ಸಲುವಾಗಿ ವಿಚಾರಣೆ ನಡೆಸುವ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸಲಾಗಿದೆ.

ಅದರಂತೆ, ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ಚಿತ್ರದುರ್ಗ ಜಿಲ್ಲೆ ಇವರು ಶ್ರೀಮತಿ ರತ್ನಮ್ಮ ಅಧ್ಯಕ್ಷರು, ದೇವಪುರ ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಕೋಡಿಹಳ್ಳಿ ಗ್ರಾಮಕ್ಕೆ ಸೇರಿದ ಕೆರೆ ಏರಿಯ (ಪಿಂಚಿಂಗ್) ಕಲ್ಲುಗಳನ್ನು ಕಿತ್ತು ಮಹಾತ್ಮಗಾಂಧಿ ನರೇಗಾ ಯೋಜನೆಯಡಿಯಲ್ಲಿ ಗೋಕಟ್ಟೆ ಕಾಮಗಾರಿಗೆ ಅಕ್ರಮವಾಗಿ ಉಪಯೋಗಿಸಿರುವ ಸಂಬಂಧ ಇವರ ವಿರುದ್ಧ ಕರ್ನಾಟಕ ಗ್ರಾಮ ಸವರಾಜ್ ಪಂಚಾಯತ್ ರಾಜ್ ಅಧಿನಿಯಮನ 1993ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (3) ವಿಚಾರಣಾ ವರದಿಯಲ್ಲಿ, ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಬೆಂಗಳೂರು ಇವರು ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ದೇವಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋಡಿಹಳ್ಳಿ ಗ್ರಾಮದ ಗ್ರಾಮಸ್ಥರು ಸೀಡಿರುವ ದೂರಿನ ಸಂಬಂಧ ಶ್ರೀಮತಿ ರತ್ನಮ್ಮ, ಅಧ್ಯಕ್ಷರು, ದೇವಪುರ ಗ್ರಾಂ ಪಂಚಾಯಿತಿರವರಿಗೆ ನೋಟೀಸ್ ನೀಡಿದ ದಿನಾಂಕ: 18.10.2019 ರಂದು ವಿಚಾರಣೆ ಮಾಡಿ ಅವರಿಂದ ಹೇಳಿಕೆ, ಹಾಗೂ ಲಿಖಿತ ಹೇಳಿಕೆಯನ್ನು ಪಡೆ;ಯಲಾಗಿರುತ್ತದೆ. ಶ್ರೀಮತಿ ರತ್ನಮ್ಮ, ದೇವಪುರ ಗ್ರಾಮ ಪಂಚಾಯಿತಿರವರು ನೀಡಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿದಾಗ 2018-19ನೇ ಸಾಲಿನ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೂಲಿ ಕೆಲಸ ಮಾಡುವ ಸಂದರ್ಭದಲ್ಲಿ ಕೂಲಿ ಕೆಲಸಗಾರರು ಕೋಡಿಹಳ್ಳಿ ಕೆರೆಯ ಏರಿಯ ಕಲ್ಲುಗಳನ್ನು ಕಿತ್ತು ಹಾಖಿ ಗೋಕಟ್ಟೆ ನಿರ್ಮಿಸುವ ಸ್ಥಳಕ್ಕೆ ತೆಗೆದುಕೊಂಡು ಹೋಗಿರುತ್ತೇನೆ ಈ ವಿಷಯ ತಿಳಿದ ತಕ್ಷಣ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಜೊತೆಯಲ್ಲಿ ಸ್ಥಳ ಪರಿಶೀಲನೆ ಮಾಡಿ, ಅದೇ ಕೂಲಿ ಕೆಲಸಗಾರರಿಂದ ದುರಸ್ತಿ ಮಾಡಿಸಿರುವುದಾಗಿ ಮನವಿ ಮಾಡಿರುತ್ತಾರೆ. ಜೊತೆಗೆ ಈ ವಿಷಯದ ಬಗ್ಗೆ ಹೊಸದುರ್ಗ ಪೋಲೀಸ್ ಠಾಣೆಯಲ್ಲಿ ದೂರು ಅರ್ಜಿ ದಾಖಲಾಗಿ ಗ್ರಾಮಸ್ಥರ ಸಮಕ್ಷಮದಲ್ಲಿ ಕೆರೆಯ ಏರಿಯನ್ನು ದುರಸ್ಥಿಗೊಳಿಸಿರುವುದಾಗಿ ಇದು ಸುಳ್ಳು ದಲೂರು ಎಂಬುದಾಗಿ ಹೇಳಿ ಹೊಸದುರ್ಗ ಪೋಲೀಸ್ ಠಾಣೆಯಲ್ಲಿ ದೂರು ಅರ್ಜಿಯನ್ನು ಮುಕ್ತಾಯ ಮಾಡಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗಿ ಕೋಡಿಹಳ್ಳಿ ಗ್ರಾಮದ ಸದಸ್ಯರಾದ ಶ್ರೀ. ಸೋಮಶೇಖರ, ದೇವಪುರ ಭೋವಿಹಳ್ಳಿ ಗ್ರಾಮಸ್ಥರಾದ ಶ್ರೀ. ಮಂಜಪ್ಪ ಮತ್ತು ಗ್ರಾಮ ಪಂಚಾಯಿತಿರಾತ್ರೋರಾತ್ರಿ ಯಾರ ಗಮನಕ್ಕೂ

ಬಾರದೆ ಕಾಮಗಾರಿ ಸ್ಥಳಕ್ಕೆ ಕೆರೆ ಏರಿ ಕಲ್ಲುಗಳನ್ನು ಕಿತ್ತು ಸಾಗಿಸಿರುವುದು ಹಾಗೂ ಸದರಿಯವರು ತಾವೇ ದುರಸ್ತಿ ಮಾಡಿಸಿರುವುದಾಗಿ ಗ್ರಾಮಸ್ಥರ ಮುಂದೆ ಹಾಗೂ ಮಹಜರ್‌ನಲ್ಲಿ ಒಪ್ಪಿಕೊಂಡಿರುವುದರಿಂದ ಅಧ್ಯಕ್ಷರು ಸೇರಿದಂತೆ ಮೇಲ್ಕಂಡವರು ಈ ಪ್ರಕರಣದಲ್ಲಿ ಭಾಗಿಯಾಗಿರುವುದು ಕಂಡುಬಂದಿರುತ್ತದೆ. ಆದ ಕಾರಣ ಶ್ರೀಮತಿ ರತ್ನಮ್ಮ, ಅಧ್ಯಕ್ಷರು ದೇವಪುರ ಗ್ರಾಮ ಪಂಚಾಯಿತಿರವರಿಗೆ ಕರ್ನಾಟಕ ಪಂಚಾಯತ್ ರಆಜ್ ಅಧಿನಿಯಮ 1993 ರ ಪ್ರಕರಣ 43(ಎ) ರ 48(4) ರನ್ವಯ ಕ್ರಮ ಜರುಗಿಸಬಹುದಾಗಿದೆ ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಕರಣದ ವಿಚಾರಣೆ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಕೋಡಿಹಳ್ಳಿ ಗ್ರಾಮದ ಸದಸ್ಯರಾದ ಶ್ರೀ. ಸೋಮಶೇಖರ, ದೇವಪುರ ಭೋವಿಹಳ್ಳಿ ಗ್ರಾಮಸ್ಥರಾದ ಶ್ರೀ. ಮಂಜಪ್ಪ ಇವರು ರಾತ್ರೋರಾತ್ರಿ ಯಾರ ಗಮನಕ್ಕೂ ಬಾರದೆ ಕಾಮಗಾರಿ ಸ್ಥಳಕ್ಕೆ ಕೆರೆ ಏರಿ ಕಲ್ಲುಗಳನ್ನು ಕಿತ್ತು ಸಾಗಿಸಿರುವುದು ಹಾಗೂ ಸದರಿಯವರು ತಾವೇ ದುರಸ್ತಿ ಮಾಡಿಸಿರುವುದಾಗಿ ಗ್ರಾಮಸ್ಥರ ಮುಂದೆ ಹಾಗೂ ಮಹಜರ್‌ನಲ್ಲಿ ಒಪ್ಪಿಕೊಂಡಿರುವುದರಿಂದ ಹಾಗೂ ಶ್ರೀಮತಿ ರತ್ನಮ್ಮ, ಅಧ್ಯಕ್ಷರು ದೇವಪುರ ಗ್ರಾಮ ಪಂಚಾಯತಿ ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ಮೇಲಿನ ಆಪಾದನೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣದ 43(ಎ), 48(4) ಮತ್ತು48(5) ರನ್ವಯ ಅಧ್ಯಕ್ಷರ ಸ್ಥಾನದಿಂದ ವಜಾಗೊಳಿಸಿ ಸದಸ್ಯತ್ವ ಹಾಗೂ ಸದಸ್ಯರುಗಳನ್ನು ಸಹ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 26 ಗ್ರಾಪಂಅ 2020 ಬೆಂಗಳೂರು, ದಿನಾಂಕ: 24.01.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ರತ್ನಮ್ಮ, ಅಧ್ಯಕ್ಷರು ದೇವಪುರ ಗ್ರಾಮ ಪಂಚಾಯತಿ ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯ ಕೋಡಿಹಳ್ಳಿ ಗ್ರಾಮದ ಸದಸ್ಯರಾದ ಶ್ರೀ.ಸೋಮಶೇಖರ, ದೇವಪುರ ಭೋವಿಹಳ್ಳಿ ಗ್ರಾಮಸ್ಥರಾದ ಶ್ರೀ. ಮಂಜಪ್ಪ ಇವರುಗಳು ರಾತ್ರೋರಾತ್ರಿ ಯಾರ ಗಮನಕ್ಕೂ ಬಾರದೆ ಕಾಮಗಾರಿ ಸ್ಥಳಕ್ಕೆ ಕೆರೆ ಏರಿ ಕಲ್ಲುಗಳನ್ನು ಕಿತ್ತು ಸಾಗಿಸಿರುವುದು ಹಾಗೂ ಸದರಿಯವರು ತಾವೇ ದುರಸ್ತಿ ಮಾಡಿಸಿರುವುದಾಗಿ ಗ್ರಾಮಸ್ಥರ ಮುಂದೆ ಹಾಗೂ ಮಹಜರ್‌ನಲ್ಲಿ ಒಪ್ಪಿಕೊಂಡಿರುವುದರಿಂದ ಇವರನ್ನು ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣದ 48(4) ಮತ್ತು 48(5) ರನ್ವಯ ದೇವಪುರ ಗ್ರಾಮ ಪಂಚಾಯತಿಯ ಅಧ್ಯಕ್ಷರ ಸ್ಥಾನದಿಂದ ವಜಾಗೊಳಿಸಿ, ಸದಸ್ಯತ್ವದಿಂದ ತೆಗೆದು ಹಾಕಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಈ ಅಕ್ರಮದಲ್ಲಿ ಬಾಗಿ ಆದಂತಹ ಶ್ರೀ. ಸೋಮಶೇಖರ, ಸದಸ್ಯರು, ದೇವಪುರ ಗ್ರಾಮ ಪಂಚಾಯಿತಿ ಇವರನ್ನು ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣದ 43(ಎ) ರಡಿ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar
(ನವೀನ್ ಕುಮಾರ್. ಬಿ) 24/01/2020.
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**<u>ಇವರಿಗೆ:</u>**

1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಬೆಂಗಳೂರು, 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು.
2) ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ ಜಿಲ್ಲೆ.
4) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ದೇವಪುರ ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

6) ಶ್ರೀಮತಿ ರತ್ನಮ್ಮ ಹಿಂದಿನ ಅಧ್ಯಕ್ಷರು, ಮತ್ತು ಶ್ರೀ. ಸೋಮಶೇಖರ, ಹಿಂದಿನ ಸದಸ್ಯರು, ದೇವಪುರ ಗ್ರಾಮ ಪಂಚಾಯಿತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (**ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ಇವರ ಮುಖಾಂತರ**)

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಮಾನ್ಯ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.
4) ಗಣಕ ಕೋಶ.